2) ಬೀದರ್‌ನಿಂದ–ಔರಂಗಾಬಾದ್–ನಿಜಾಮಾಬಾದ್–ಮುಂಬೈ–ಶಿರಡಿ ಗೋವಾಗಳಿಗೆ ಅಂತರ ರಾಜ್ಯ ಸಾರಿಗೆ ವ್ಯವಸ್ಥೆಯನ್ನು ಮಾಡುವಂತೆ ಸರ್ಕಾರಕ್ಕೆ ಮನವಿಗಳೇನಾದರೂ ಬಂದಿದೆಯೇ?

3) ಹಾಗಿದ್ದಲ್ಲಿ, ಆ ಮನವಿಗಳ ಬಗ್ಗೆ ಕೈಗೊಂಡ ಕ್ರಮಗಳೇನು?

4) ಬಸವಕಲ್ಯಾಣದಿಂದ–ಬೆಂಗಳೂರು–ಲಾತೂರು–ಕೂಡಲಸಂಗಮ–ಉಳವಿ–ಪೂನಾ–ಹೈದರಾಬಾದ್–ಜರಸಂಗಮ–ಉಮರಗ–ನೀಲಂಗಗಳಿಗೆ ರಾಜ್ಯ ರಸ್ತೆ ಸಾರಿಗೆ ಬಸ್ಸುಗಳ ಸೌಲಭ್ಯವನ್ನು ಕಲ್ಪಿಸುವಂತೆ ಅನೇಕ ಮನವಿಗಳನ್ನು ನೀಡಿದ್ದರೂ ಇದುವರೆವಿಗೂ ಬಸ್ಸು ಸೌಲಭ್ಯವನ್ನು ಕಲ್ಪಿಸದಿರಲು ಕಾರಣವೇನು?

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು):–

1) ಹುಮ್ನಾಬಾದ್ ಕೇಂದ್ರ ಸ್ಥಾನವಾಗುವಂತೆ ಬೀದರ್ ವಿಭಾಗವನ್ನು ರಚಿಸಲು ತಾತ್ವಿಕವಾಗಿ ನಿರ್ಧರಿಸಲಾಗಿದೆ. ಆರ್ಥಿಕ ಸಹಾಯ, ಯಂತ್ರೋಪಕರಣಗಳನ್ನು ಹೊಂದಿಸುವುದು ಸಿಬ್ಬಂದಿಯ ಆಯ್ಕೆ ಇತ್ಯಾದಿಗಳನ್ನೊಳಗೊಂಡಂತೆ ವಿಭಾಗ ರಚನೆಗೆ ಪೂರ್ವಭಾವಿ ಸಿದ್ಧತೆಗಳ ಬಗೆಗೆ ನಿರ್ಧಾರ ಕೈಗೊಳ್ಳಲಾಗುತ್ತಿದೆ. ಈ ಸಿದ್ಧತೆಗಳಾದೊಡನೆಯೇ ಬೀದರ್ ವಿಭಾಗವನ್ನು ರಚಿಸಲಾಗುವುದು.

2) ಬಂದಿದೆ.

3) ಅಂತರ ರಾಜ್ಯ ಸಾರಿಗೆಗಳ ಕಾರ್ಯಾಚರಣೆಯು ಅಂತರ ರಾಜ್ಯ ಒಪ್ಪಂದಗಳಿಗೆ ಒಳಪಡುವುದರಿಂದ ಮಹಾರಾಷ್ಟ್ರ, ಆಂಧ್ರಪ್ರದೇಶ ಮತ್ತು ಗೋವಾ ರಾಜ್ಯಗಳ ಸರ್ಕಾರಗಳೊಡನೆ ಮುಂದೆ ಬದಲಾಗುವ ಅಂತರ ರಾಜ್ಯ ಒಪ್ಪಂದದ ಸಮಯದಲ್ಲಿ ಈ ಪ್ರಸ್ತಾವನೆಗಳನ್ನು ಚರ್ಚಿಸಿ ಅಖೈರುಗೊಳಿಸಲಾಗುವುದು.

4) 1) 1989ನೇ ಮಾರ್ಚ್ ತಿಂಗಳಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ಬಸವಕಲ್ಯಾಣದಿಂದ ಉಳಿವಿಗೆ ಧಾರವಾಡ, ಹಳಿಯಾಳ ಮತ್ತು ದಾಂಡೇಲಿ ಮಾರ್ಗವಾಗಿ ಒಂದು ಸಾರಿಗೆಯನ್ನು ಪ್ರಾರಂಭಿಸಿತು. ಆದರೆ ಇದು ಸಾಕಷ್ಟು ಜನಾಧರಣೆ ಪಡೆಯಲು ವಿಫಲವಾಗಿದ್ದರಿಂದ 1989ನೇ ಜುಲೈ ತಿಂಗಳಿನಿಂದ ಧಾರವಾಡಕ್ಕೆ ಮೊಟಕುಗೊಳಿಸಲಾಗಿದೆ.

2) ಬಸವಕಲ್ಯಾಣದಿಂದ ಕೂಡಲಸಂಗಮಕ್ಕೆ ಅಗತ್ಯ ನೇರ ಪ್ರಯಾಣಿಕರ ಕೊರತೆಯಿರುವುದರಿಂದ ಹಾಗೂ ಅಂತಹ ಪ್ರಯಾಣಿಕರು ಬಾಗಲಕೋಟೆ ಅಥವಾ ಬಸವನಬಾಗೇವಾಡಿಗೆ ಬಸವಕಲ್ಯಾಣದಿಂದ ಒದಗಿಸಲಾಗಿರುವ ಸಾರಿಗೆಗಳ ಮೂಲಕ ಪ್ರಯಾಣ ಮಾಡಿ ಕೂಡಲಸಂಗಮ ಸಾರಿಗೆಗಳ ಸಂಪರ್ಕವನ್ನು ಪಡೆಯಬಹುದು. ಆದ್ದರಿಂದ ಈ ಮಾರ್ಗದಲ್ಲಿ ಸದ್ಯಕ್ಕೆ ನೇರಸಾರಿಗೆ ಪ್ರಾರಂಭಿಸುವ ಅಗತ್ಯ ಕಾಣದು.

3) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ಬೀದರ್ ಮತ್ತು ಗುಲ್ಬರ್ಗಾದಿಂದ ಬೆಂಗಳೂರಿಗೆ ಸಾರಿಗೆ ಸೌಕರ್ಯ ಒದಗಿಸಿದೆ. ಬಸವಕಲ್ಯಾಣದಿಂದ ಬೆಂಗಳೂರಿಗೆ ಹೋಗಬಯಸುವ ಪ್ರಯಾಣಿಕರು ಹುಮ್ನಾಬಾದ್ ಅಥವಾ ಗುಲ್ಬರ್ಗಾದಲ್ಲಿ ಈ ಸಾರಿಗೆಗಳ ಸಂಪರ್ಕವನ್ನು ಸರಾಗವಾಗಿ ಪಡೆಯಬಹುದು.

4) ಬಸವಕಲ್ಯಾಣದಿಂದ ವಿವಿಧ ಸ್ಥಳಗಳಿಗೆ ಅಂತರರಾಜ್ಯ ಸಾರಿಗೆಗಳನ್ನು ಪ್ರಾರಂಭಿಸುವ ಪ್ರಸ್ತಾವನೆಗಳನ್ನು ಮುಂದೆ ಜರುಗುವ ಅಂತರ ರಾಜ್ಯ ಸಭೆಗಳಲ್ಲಿ ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶ ಸರ್ಕಾರಗಳೊಡನೆ ಚರ್ಚಿಸಿ ಅಖೈರುಗೊಳಿಸಲಾಗುವುದು.

ಬ್ರಹ್ಮಾವರದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಸಾಕಷ್ಟು ಸೌಲಭ್ಯವನ್ನು ಒದಗಿಸುವುದು.

(475) ಶ್ರೀ ಪಿ. ಬಸವರಾಜು (ಬ್ರಹ್ಮಾವರ) :– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬ್ರಹ್ಮಾವರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಹಲವಾರು ಸೌಲಭ್ಯಗಳ ಕೊರತೆಯಿಂದ ಸಾರ್ವಜನಿಕರಿಗೆ ತೊಂದರೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಆರೋಗ್ಯ ಕೇಂದ್ರವನ್ನು ಸುಸಜ್ಜಿತ ಆಸ್ಪತ್ರೆಯನ್ನಾಗಿ ಮಾರ್ಪಡಿಸಲು ತೆಗೆದುಕೊಂಡ ಕ್ರಮಗಳೇನು?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಆರೋಗ್ಯ ಸಚಿವೆಯವರು):–

ಅ) ಇಲ್ಲ

ಆ) ಜಿಲ್ಲಾ ಪರಿಷತ್ತು ತನ್ನ ಆಯವ್ಯಯದಲ್ಲಿ ಸಾಕಷ್ಟು ಹಣವನ್ನು ಮುಂಬರುವ ವರ್ಷಗಳಲ್ಲಿ ಒದಗಿಸಿಕೊಂಡು ಶಿಫಾರಸ್ಸು ಮಾಡಿದಲ್ಲಿ ಈ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸುವ ಬಗ್ಗೆ ಪರಿಶೀಲಿಸಲಾಗುವುದು.

ದಿನಾಂಕ 28–11–1990ರ ಚುಕ್ಕೆ ರಹಿತ ಪ್ರಶ್ನೋತ್ತರಗಳು

ವಿಕ್ಟೋರಿಯ ಆಸ್ಪತ್ರೆಯಲ್ಲಿರತಕ್ಕ ಯಂತ್ರೋಪಕರಣಗಳ ದುರಸ್ತಿ ಬಗ್ಗೆ

488. ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ) :– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಲ್ಲಿರತಕ್ಕ ಎಕ್ಸ್–ರೇ ಯಂತ್ರಗಳ ಸಂಖ್ಯೆ ಎಷ್ಟು?

ಆ) ಪ್ರತಿದಿನ ಎಷ್ಟು ಜನ ರೋಗಿಗಳು (ಸರಾಸರಿ) ಈ ಯಂತ್ರದ ಉಪಯೋಗವನ್ನು ಪಡೆಯುತ್ತಾರೆ ಬರತಕ್ಕ ಎಲ್ಲ ರೋಗಿಗಳಿಗೂ (ಅವಶ್ಯಕತೆ ಇರುವವರಿಗೆ) ಇದರ ಉಪಯೋಗ ಸಿಕ್ಕುತ್ತಿದೆಯೇ?

ಇ) ಸದರಿ ಯಂತ್ರೋಪಕರಣ ಕೆಟ್ಟು ಹೋದಲ್ಲಿ ಬದಲಿ ವ್ಯವಸ್ಥೆ ಏನು ಮಾಡಲಾಗುವುದು?

ಈ) ಕೆಟ್ಟು ಹೋದ ಯಂತ್ರವನ್ನು ಇಂತಿಷ್ಟು ದಿವಸದಲ್ಲಿ ದುರಸ್ತಿ ಮಾಡಿಸಬೇಕೆಂಬ ನಿಯಮ ಏನಾದರೂ ಇದೆಯೇ?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವೆಯವರು):–

ಅ) ಏಳು

ಆ) ಪ್ರತಿದಿನ ಅಂದಾಜು 180 ಜನ ರೋಗಿಗಳಿಗೆ ಇದರ ಉಪಯೋಗ ಲಭ್ಯವಾಗುತ್ತಿದೆ. ಅಗತ್ಯವಿರುವ ರೋಗಿಗಳಿಗೆ ಲಭ್ಯವಿರುವ ಕ್ಷ–ಕಿರಣಯಂತ್ರಗಳ ಸಹಾಯದಿಂದ ಸಾಧ್ಯವಾದಷ್ಟು ಪರೀಕ್ಷೆಗಳನ್ನು ಮಾಡಲಾಗುತ್ತಿದೆ.

ಇ) ಯಂತ್ರ ಕೆಟ್ಟು ಹೋದ ತಕ್ಷಣ ಅದನ್ನು ದುರಸ್ತಿಗೊಳಿಸಲಾಗುವುದು ಅಲ್ಲಿಯವರೆವಿಗೂ ಇತರೇ ಯಂತ್ರಗಳಲ್ಲಿ ಕ್ಷ–ಕಿರಣ ತೆಗೆಯಲಾಗುವುದು.

ಈ) ನಿಯಮ ಏನೂ ಇಲ್ಲ, ರೋಗಿಗಳ ಹಿತದೃಷ್ಟಿಯಿಂದ ಅದನ್ನು ಬೇರೆ ದುರಸ್ತಿಪಡಿಸಲಾಗುವುದು.

ಟಿ. ದಾಸರಹಳ್ಳಿ ವ್ಯಾಪ್ತಿಯಲ್ಲಿರುವ ನ್ಯಾಯ ಬೆಲೆ ಅಂಗಡಿಗಳ ಬಗ್ಗೆ

547 ಶ್ರೀ ಜಿ.ಎಸ್. ಶಿವನಂಜಪ್ಪ (ಗುಬ್ಬಿ) :– ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಉತ್ತರ ತಾಲ್ಲೂಕು ಟಿ. ದಾಸರಹಳ್ಳಿ ವ್ಯಾಪ್ತಿಯಲ್ಲಿರುವ ಸರ್ಕಾರಿ ನ್ಯಾಯಬೆಲೆ ಅಂಗಡಿಗಳ ಸಂಖ್ಯೆ ಎಷ್ಟು?

ಆ) ಸೀಮೆ ಎಣ್ಣೆ ವಿತರಣೆ ಮಾಡಲು ಲೈಸೆನ್ಸ್ ಪಡೆದಿರುವವರ ಸಂಖ್ಯೆ ಎಷ್ಟು?